**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಬಸವನ-ಬಾಗೇವಾಡಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 612/2023.**

**D.W.-1**

**ಸಾಕ್ಷಿಗೆ ದಿನಾಂಕ 25.06.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು : ಅಪ್ಪು ತಂ. ಶಂಕರ ಲಮಾಣಿ

ವಯಸ್ಸು : 34 ವರ್ಷ

ಉದ್ಯೋಗ : ವ್ಯಾಪಾರ ಮತ್ತು ವ್ಯವಸಾಯ

ವಾಸಸ್ಥಳ : ಉಪ್ಪಲದಿನ್ನಿ

**ಮುಖ್ಯವಿಚಾರಣೆ ಆರೋಪಿ ಪರ ಶ್ರೀ. ಎ.ಜಿ. ಎನ್ ವಕೀಲರಿಂದ:-**

1. ನಾನು ಉಮುಲು ನಾಯಕ- ಪಿರ್ಯಾದಿಯವರಿಗೆ ಯಾವುದೇ ಚೆಕನ್ನು ನೀಡಿಲ್ಲ ಮತ್ತು ಅವರಿಂದ ಯಾವುದೇ ಸಾಲವನ್ನು ಪಡೆದಿಲ್ಲ. ನಿಪಿ-1 ನ್ನು ಪಿರ್ಯಾದಿ ನನ್ನ ಮನೆಯಿಂದ ಕಳ್ಳತನ ಮಾಡಿರುತ್ತಾರೆ. ಅವರು ನನ್ನ ಸಂಬಂಧಿಕರು ಹೀಗಾಗಿ ಅವರು ನನ್ನ ಮನೆಗೆ ಬಂದು ಹೋಗಿ ಮಾಡುತ್ತಿದ್ದರು. ನನ್ನ ಚೆಕು ಕಳ್ಳತನವಾದ ಬಗ್ಗೆ ನನಗೆ ತಿಳಿದ ನಂತರ ನಾನು ಬ್ಯಾಂಕಿಗೆ ಅದನ್ನು ನಗಧೀಕರಣಗೊಳಿಸದಂತೆ ' Stop Payment' ಅರ್ಜಿ ನೀಡಿರುತ್ತೇನೆ. ನಂತರ ನನ್ನ ಕಳ್ಳತನವಾದ ಚೆಕ್ಕು ರಾಮ ಲಮಾಣಿ, ರಮೇಶ ತಂ. ಉಮುಲು ಲಮಾಣಿ ರವರ ಹತ್ತಿರ ಇದ್ದ ಬಗ್ಗೆ ಗೊತ್ತಾಗಿ ನಾನು ಗ್ರಾಮದ ಹಿರಿಯರನ್ನು ಸೇರಿಸಿರುತ್ತೇನೆ. ಆಗ ರಾಮ ಲಮಾಣಿ ಮತ್ತು ರಮೇಶ ತಂ. ಉಮುಲು ಲಮಾಣಿ ರವರು ಚೆಕ್ಕು ತಮ್ಮ ಹತ್ತಿರ ಇರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಆದರು ಸಹ ನನಗೆ ನನ್ನ ಚೆಕ್ಕನ್ನು ಮರಳಿ ನೀಡಿರುವುದಿಲ್ಲ. ಆಗ ನಾನು ಅವರ ವಿರುದ್ಧ ದೂರು ನೀಡುವುದಾಗಿ ಹೇಳಿದ್ದೆ. ಆಗ ಗ್ರಾಮದ ಹಿರಿಯರು ತಾವು ಸಮಸ್ಯಯನ್ನು ಬಗೆಹರಿಸುವುದಾಗಿ ಹೇಳಿದ್ದರಿಂದ ದೂರನ್ನು ನೀಡಿರುವುದಿಲ್ಲ.

2. ಸ್ವಲ್ಪ ದಿನಗಳ ನಂತರ ಮತ್ತೆ ಅವರ ಹತ್ತಿರ ಚೆಕ್ಕು ಕೇಳಿದಾಗ ಅವರು ನನಗೆ ಅವಾಚ್ಯ ಶಬ್ಧಗಳಿಂದ ಬೈದು, ಜೀವದ ಬೆದರಿಕೆ ಹಾಕಿರುತ್ತಾರೆ. ಆದ್ದರಿಂದ ನಾನು ನನ್ನ ವಕೀಲರ ಮುಖಾಂತರ ಅವರಿಗೆ ಜನೇವರಿ-2023 ರಲ್ಲಿ ನೋಟಿಸು ನೀಡಿರುತ್ತೇನೆ. ನಾನು ನೀಡಿದ ನೋಟಿಸಿಗೆ ಉತ್ತರವನ್ನು ನೀಡದೇ, ನನ್ನ ಕದ್ದ ಚೆಕ್ಕನ್ನು ಬ್ಯಾಂಕಿಗೆ ನಗದೀಕರಣಕ್ಕೆ ಸಲ್ಲಿಸಿ ಈ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ.

**ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಬಸವನ-ಬಾಗೇವಾಡಿ.